1. ಗೋವಿನಕೋವಿ ಶ್ರೀ ಗುರುಬಸಪ್ಪ ಪ್ರೌಢಶಾಲೆ ಅರಕೆರೆ ಹೊನ್ನಾಳಿ ತಾ:
2. ಶ್ರೀ ಗುರುಮಹಾರುದ್ರಸ್ವಾಮಿ ಹೈಸ್ಕೂಲ್, ಬಳಲಕೊಪ್ಪ ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಇ) ಮೇಲೆ ತಿಳಿಸಿರುವ ಎರಡೂ ಶಾಲೆಗಳೂ ಅನುದಾನಿತ ಶಾಲೆಗಳಾಗಿರುತ್ತವೆ. ಸೊನ್ನೆ ಫಲಿತಾಂಶ ಅಥವಾ ತೀರಾ ಕಡಿಮೆ ಫಲಿತಾಂಶ ಬಂದಿರುವ ಶಾಲೆಗಳಿಗೆ ಇಲಾಖಾ ಅಧಿಕಾರಿಗಳು ಭೇಟಿ ನೀಡಿ ಶಿಕ್ಷಕರಿಗೆ ಸೂಕ್ತ ತಿಳುವಳಿಕೆ ನೀಡಿ ಮಾರ್ಗದರ್ಶನ ನೀಡಿ ಫಲಿತಾಂಶ ಸುಧಾರಿಸಲು ಕ್ರಮ ಕೈಗೊಳ್ಳಲು ತಿಳಿಸಲಾಗುತ್ತಿದೆ. ಈ ಬಗ್ಗೆ ಇಲಾಖೆಯಿಂದ ಸುತ್ತೋಲೆ ಕೂಡ ನೀಡಲಾಗುತ್ತದೆ. ಜಿಲ್ಲಾ ಮಟ್ಟದ ಮುಖ್ಯ ಶಿಕ್ಷಕರ ಸಭೆಯಲ್ಲಿ ಈ ಬಗ್ಗೆ ತೀವ್ರ ಗಮನಹರಿಸಿ ಸಂಬಂಧಿಸಿದ ಶಾಲೆಗಳಿಗೆ ಸೂಕ್ತ ತಿಳುವಳಿಕೆ ಮಾರ್ಗದರ್ಶನ ನೀಡಲಾಗುತ್ತಿದೆ. ಹಾಗೂ ಡಿ.ಎಸ್.ಇ.ಆರ್.ಟಿ.ಯ ಮೌಲ್ಯ ಮಾಪನ ವಿಭಾಗವು ಸಹ ಶಿಕ್ಷಕರಿಗೆ ಫಲಿತಾಂಶ ಉತ್ತಮ ಪಡಿಸಲು ವಿಶೇಷ ತರಬೇತಿ ನೀಡಲಾಗುತ್ತಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯ ಉತ್ಪನ್ನಗಳ ಕಳ್ಳ ಸಾಗಾಣಿಕೆಯ ವಾಹನಗಳ ಮುಟ್ಟುಗೋಲು

520 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಅರಣ್ಯ ಉತ್ಪನ್ನಗಳ ಕಳ್ಳಸಾಗಾಣಿಕೆಯ ಸಂದರ್ಭದಲ್ಲಿ ಅರಣ್ಯ ಇಲಾಖಾ ವತಿಯಿಂದ ಮುಟ್ಟುಗೋಲು ಹಾಕಿಕೊಂಡ ವಾಹನಗಳ ಸಂಖ್ಯೆ ಎಷ್ಟು?

ಆ) ಈ ವಾಹನಗಳು ಎಷ್ಟು ಸಮಯದಿಂದ ಇಲಾಖೆಯ ವಶದಲ್ಲಿವೆ?

ಇ) ಇವುಗಳ ಶೀಘ್ರ ವಿಲೇವಾರಿಯ ಬಗ್ಗೆ ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಶಿವಮೊಗ್ಗ ಜಿಲ್ಲೆಯಲ್ಲಿ 1994-95 ಮತ್ತು 1995-96ರ ಸಾಲಿನಲ್ಲಿ (ಜುಲೈ 95ರವರೆಗೆ) ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆಯ ಪ್ರಕರಣದಲ್ಲಿ 98 ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಆ) ಕಳೆದ ಎರಡು ವರ್ಷದಿಂದ ಈ ವಾಹನಗಳು ಇಲಾಖೆಯ ವಶದಲ್ಲಿದ್ದು ಈಗ 48 ವಾಹನಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಿದ್ದು ಉಳಿದ 50 ವಾಹನಗಳನ್ನು ಹರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಕಾನೂನು ಚೌಕಟ್ಟಿನಲ್ಲಿ ಶೀಘ್ರ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕುಟುಂಬ ಯೋಜನೆ ಕುರಿತು

550 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಟುಂಬ ಯೋಜನೆ ಮೂಲಕ ಜನ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಯಾವ ಕಾರ್ಯಕ್ರಮ ರೂಪಿಸಲಾಗಿದೆ.

ಆ) ಒಂದೇ ಮಗುವಿಗೆ ಶಸ್ತ್ರ ಚಿಕಿತ್ಸೆ ಮಾಡಿಸಿದರೆ ಅಂತಹವರಿಗೆ ಸರ್ಕಾರದವರು ಉದ್ಯೋಗ ಹಣಕಾಸಿನ ಸಹಾಯ ಮಾಡುವರೇ?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಕುಟುಂಬ ಕಲ್ಯಾಣ ಯೋಜನೆಯಡಿಯಲ್ಲಿ ಜನ ನಿಯಂತ್ರಣಕ್ಕಾಗಿ ಶಾಶ್ವತ ಹಾಗೂ ತಾತ್ಕಾಲಿಕ ವಿಧಾನಗಳನ್ನು ಅಳವಡಿಸಿಕೊಳ್ಳುವಂತೆ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗಿದೆ. ಅವುಗಳು ಈ ಕೆಳಗಿನಂತಿವೆ:

ತಾತ್ಕಾಲಿಕ ವಿಧಾನ : ಒಂದು ಹೆರಿಗೆಗೂ ಇನ್ನೊಂದು ಹೆರಿಗೆಗೂ ಅಂತರವನ್ನು ಇಡಲು ಈ ವಿಧಾನವನ್ನು ಉಪಯೋಗಿಸಲಾಗುವುದು.

ಸ್ತ್ರೀಯರು ಬಳಸುವ ತಾತ್ಕಾಲಿಕ ವಿಧಾನಗಳು :

ಎ) **ಕಾಪರ್ ಟಿ** : ಇದು ಅತಿ ಸರಳವಾದ ವಿಧಾನ. 'ಟಿ' ಆಕಾರದ ಪ್ಲಾಸ್ಟಿಕ್ ಜೋಡಣೆಯೊಂದನ್ನು ವೈದ್ಯರು ಸ್ತ್ರೀಯರ ಗರ್ಭಕೋಶದಲ್ಲಿ ಅಳವಡಿಸುವರು. ಇದನ್ನು 3 ವರ್ಷದವರೆಗೆ ಧರಿಸಬಹುದು. ಇದು ಗರ್ಭಧಾರಣೆಯನ್ನು ತಡೆಗಟ್ಟುವುದು. ಇದನ್ನು ತರಬೇತಿ ಪಡೆದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯವರು ಮತ್ತು ಹಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಸಹ ಅಳವಡಿಸುವರು.

ಬಿ) **ನುಂಗುವ ಮಾತ್ರೆ** : ಇದು 21 ಗರ್ಭ ನಿರೋಧಕ ಮಾತ್ರೆಗಳು ಹಾಗೂ 7 ರಕ್ತಹೀನತೆಗಾಗಿ ಉಪಯೋಗಿಸುವ ಮಾತ್ರೆಗಳನ್ನೊಳಗೊಂಡ 28 ಮಾತ್ರೆಗಳ ಪ್ಯಾಕೆಟ್‌ನಲ್ಲಿ ದೊರೆಯುತ್ತದೆ. ಇದನ್ನು ಸ್ತ್ರೀಯರು ನಿಯಮಿತವಾಗಿ ದಿನಕ್ಕೊಂದರಂತೆ ಗುಳಿಗೆ ನುಂಗುತ್ತಿರುವವರೆಗೆ ಗರ್ಭಧಾರಣೆಯನ್ನು ತಡೆಗಟ್ಟುತ್ತದೆ.

ಪುರುಷರು ಬಳಸುವ ತಾತ್ಕಾಲಿಕ ವಿಧಾನ :

ಎ) **ನಿರೋಧ** : ಇದು ವಿಶಿಷ್ಟ ರಬ್ಬರಿನಿಂದ ತಯಾರಿಸಲ್ಪಟ್ಟ ಚೀಲ, ಇದನ್ನು ಪುರುಷರು ಪ್ರತಿ ಸಲ ಲೈಂಗಿಕ ಕ್ರಿಯೆಯಲ್ಲಿ ತಮ್ಮ ಜನನಾಂಗದ ಮೇಲೆ ಧರಿಸುವುದರಿಂದ ಗರ್ಭಧಾರಣೆಯನ್ನು ತಡೆಗಟ್ಟುವುದು.

ಶಾಶ್ವತ ವಿಧಾನಗಳು - ಮಹಿಳೆಯರಿಗಾಗಿ

(1) **ಟ್ಯೂಬೆಕ್ಟಮಿ** : ಹೊಕ್ಕಳಿನ ಕೆಳಗೆ, ಹೊಟ್ಟೆಯ ಮೇಲೆ ಒಂದು ಇಂಚಿನಷ್ಟು ಗಾಯ ಮಾಡಿ, ಎರಡೂ ಅಂಡನಾಳಗಳನ್ನು ಕತ್ತರಿಸಿ ಹೊಲಿಗೆ ಹಾಕಲಾಗುತ್ತದೆ. ಈ ಶಸ್ತ್ರ ಕ್ರಿಯೆಯಿಂದ ಗರ್ಭಧಾರಣೆಯನ್ನು ಶಾಶ್ವತವಾಗಿ ತಡೆಗಟ್ಟಲಾಗುತ್ತದೆ.

(2) **ಲ್ಯಾಪರೋಸ್ಕೊಪಿಕ್ ಟ್ಯೂಬೆಕ್ಟಮಿ** : ಈ ಶಸ್ತ್ರ ಚಿಕಿತ್ಸೆಯಲ್ಲಿ ಹೊಕ್ಕಳಿನ ಕೆಳಗೆ 1.5 ಸೆಂ.ಮೀ. ನಷ್ಟು ರಂಧ್ರ ಮಾಡಿ ಉದರ ದರ್ಶಕದ ಮುಖಾಂತರ ಅಂಡನಾಳಗಳಿಗೆ ಫಲೋಪರಿಂಗ್ ಹಾಕಿ ಗರ್ಭಧಾರಣೆಯನ್ನು ಶಾಶ್ವತವಾಗಿ ತಡೆಗಟ್ಟಲಾಗುತ್ತದೆ.

ಪುರುಷರಿಗಾಗಿ ಶಾಶ್ವತ ವಿಧಾನ :

(1) **ವ್ಯಾಸೆಕ್ಟಮಿ** : ಈ ಶಸ್ತ್ರ ಕ್ರಿಯೆಯಲ್ಲಿ ವೀರ್ಯನಾಳವನ್ನು 1 ಇಂಚಿನಷ್ಟು ಕತ್ತರಿಸಿ ಹೊಲಿಗೆ ಹಾಕುವುದರಿಂದ ಶಾಶ್ವತವಾಗಿ ಗರ್ಭಧಾರಣೆಯನ್ನು ತಡೆಗಟ್ಟಲಾಗುತ್ತದೆ.

(2) **ನೋ ಸ್ಕಾಲ್‌ಪೆಲ್ ವ್ಯಾಸೆಕ್ಟಮಿ** : ಇದೊಂದು ಹೊಸ ವಿಧಾನ. ಈ ಶಸ್ತ್ರಕ್ರಿಯೆಯಲ್ಲಿ ಗಾಯವಿಲ್ಲ, ರಕ್ತಸ್ರಾವವಿಲ್ಲ, ಇಲ್ಲಿಯೂ ವೀರ್ಯನಾಳವನ್ನು ತುಂಡರಿಸಿ, ಹೊಲಿಗೆ ಹಾಕಿ ಶಾಶ್ವತವಾಗಿ ಗರ್ಭಧಾರಣೆಯನ್ನು ತಡೆಗಟ್ಟಲಾಗುತ್ತದೆ.

ಅ) ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡವರಿಗೆ ಎಷ್ಟೇ ಮಕ್ಕಳಿದ್ದರೂ ಸರ್ಕಾರದಿಂದ ಒಟ್ಟು ರೂ. 100-00ಗಳನ್ನು ಪರಿಹಾರ ಧನವಾಗಿ ಕೊಡಲಾಗುತ್ತದೆ. ಉದ್ಯೋಗಾವಕಾಶವನ್ನು ಒದಗಿಸುವ ಯೋಜನೆ ಸದ್ಯಕ್ಕೆ ಇರುವುದಿಲ್ಲ.

ಹಳ್ಳಿಯ ಯುವಕರಿಗೆ ಕ್ರೀಡಾ ತರಬೇತಿ

552 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಳ್ಳಿಯ ಯುವಕರಿಗೆ ಕ್ರೀಡಾ ತರಬೇತಿ ಕೊಡಲು ಸರ್ಕಾರದವರು ಪರಿಶೀಲಿಸುವರೆ?

ಆ) ಹಾಗಿದ್ದಲ್ಲಿ ಈ ಬಬ್ಗೆ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಅಜಯಕುಮಾರ್ ಸರ್.ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ಕರ್ನಾಟಕ ರಾಜ್ಯದ ಪ್ರತಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ಕ್ರೀಡಾ ತರಬೇತಿಗಾಗಿ ಒಟ್ಟು 84 ಜನ ಪರಿಣಿತ ತರಬೇತಿದಾರರು ತರಬೇತಿ ನೀಡುತ್ತಿದ್ದಾರೆ. ಸದರಿ ತರಬೇತಿದಾರರ ಗ್ರಾಮೀಣ ಪ್ರದೇಶದ ಬಾಲಕ ಬಾಲಕಿಯರಿಗೆ ತರಬೇತಿ ಕಾರ್ಯವನ್ನು ಆಯಾ ಜಿಲ್ಲೆಯ ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನೀಡುತ್ತಿದ್ದಾರೆ. ಜೊತೆಗೆ ಇನ್ನು 60 ಜನ ತರಬೇತಿದಾರರನ್ನು ನೇಮಕ ಮಾಡಲು ತೀರ್ಮಾನಿಸಲಾಗಿದೆ. ಇವರುಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನೇಮಕ ಮಾಡಲಾಗುವುದು.

ಆ) ಗ್ರಾಮೀಣ ಪ್ರದೇಶದ ಕ್ರೀಡಾಪಟುಗಳಿಗೆ ತರಬೇತಿ ನೀಡಲು ಅನುಕೂಲವಾಗುವಂತೆ ಪ್ರತಿಯೊಂದು ತಾಲ್ಲೂಕು ಕೇಂದ್ರದಲ್ಲಿ ಕ್ರೀಡಾಂಗಣ ನಿರ್ಮಿಸುವ ಯೋಜನೆಯನ್ನು ಸರ್ಕಾರಿ ಹಮ್ಮಿಕೊಂಡಿದ್ದು, ಜಿಲ್ಲಾ ಪಂಚಾಯತ್ ಯೋಜನೆಯಲ್ಲಿ ಒಟ್ಟು 50 ತಾಲ್ಲೂಕು ಕ್ರೀಡಾಂಗಣಗಳು, ರಾಜ್ಯ ವಲಯದಲ್ಲಿ 12 ತಾಲ್ಲೂಕು ಕ್ರೀಡಾಂಗಣಗಳು ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ 10 ತಾಲ್ಲೂಕು ಕ್ರೀಡಾಂಗಣ ನಿರ್ಮಾಣವನ್ನು ಈಗಾಗಲೇ ಪ್ರಾರಂಭಿಸಲಾಗಿದ್ದು ಇದೇ ರೀತಿ ಬೇರೆ ತಾಲ್ಲೂಕುಗಳಲ್ಲೂ ಹಂತ ಹಂತವಾಗಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಕೈಗೆತ್ತಿಕೊಂಡು ಗ್ರಾಮೀಣ ಪ್ರದೇಶ ಬಾಲಕ ಬಾಲಕಿಯರಿಗೆ ಕ್ರೀಡಾ ತರಬೇತಿ ನೀಡಲಾಗುವುದು. ಅಲ್ಲದೆ ಗ್ರಾಮೀಣ ಪ್ರದೇಶದಲ್ಲಿ ಕುಸ್ತಿ ಪಟುಗಳಿಗೆ ಅನುಕೂಲವಾಗುವಂತೆ ಗ್ರಾಮಾಂತರ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ರಾಜ್ಯ ಹಾಗೂ ಜಿಲ್ಲಾ ಕ್ರೀಡಾ ಸಂಸ್ಥೆಗಳು ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿಭಾನ್ವಿತ ಕ್ರೀಡಾಪಟುಗಳನ್ನು ಗುರುತಿಸಿ ಸಂಸ್ಥೆಗಳ ಮುಖಾಂತರ ತರಬೇತಿ ಶಿಬಿರಗಳನ್ನು ನಡೆಸಲು ಪ್ರೋತ್ಸಾಹಿಸಲಾಗುತ್ತಿದೆ.

ಕ್ರೀಡಾಪಟುಗಳ ಜೀವನ ಭದ್ರತೆ

551 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಾಲಾ ಮಟ್ಟದಲ್ಲಿ ಕಡ್ಡಾಯ ಶಿಕ್ಷಣದ ಜೊತೆಗೆ ಕಡ್ಡಾಯ ಕ್ರೀಡೆಯನ್ನು ಜಾರಿಗೆ ತರಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಅಜಯಕುಮಾರ್ ಸರ್.ನಾಯಕ್ (ಯುವಜನ ಸೇವಾ ಕ್ರೀಡಾ ಸಚಿವರು):

ಅ) ಸದ್ಯಕ್ಕೆ ಇಲ್ಲ.